ಇಂದು ದಿನಾಂಕಃ 19.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ **ಸವಾಲುಃ 1ನೇ ಪ್ರತಿವಾದಿ ಪರ ಮಾನ್ಯ ಎ.ಡಿ.ಜಿ.ಪಿ-1 ರವರಿಂದಃ**

ನಾನು ಹಾಲಿ ವಸತಿ ಬೆಳಗಾವಿಯಲ್ಲಿರುತ್ತೇನೆ ಮತ್ತು ಅಸುಂಡಿಯಲ್ಲಿಯೂ ಇರುತ್ತೇನೆ. ಅಸುಂಡಿ ಗ್ರಾಮಕ್ಕೆ ಪ್ರತ್ಯೇಕ ಗ್ರಾಮಪಂಚಾಯತಿ ಇರುತ್ತದೆ. ಅಸುಂಡಿ ಗ್ರಾಮವು ಸವದತ್ತಿ-ಬೆಳಗಾವಿ ಮುಖ್ಯರಸ್ತೆಯಿಂದ 2 ಕಿಮೀ ಒಳಗಡೆ ಇರುತ್ತದೆ. ಮುಖ್ಯರಸ್ತೆಯಿಂದ ಅಸುಂಡಿ ಸವದತ್ತಿ 10 ಕಿಮೀ ಇರುತ್ತದೆ. ಅಸುಂಡಿ ಗ್ರಾಮ ಸಿಂಗಾರಕೊಪ್ಪ ಗ್ರಾಮದಿಂದ 4 ಕಿಮೀ ದೂರವಿರುತ್ತದೆ. ನಡುವಿನ ಹಳ್ಳಿ ಮತ್ತು ಕೆಂಚಲಾರಕೊಪ್ಪ ಗ್ರಾಮದಿಂದ ಸುಮಾರು 5 ಕಿಮೀ ದೂರದಲ್ಲಿರುತ್ತದೆ. ಅಸುಂಡಿ ಗ್ರಾಮ ಮಲಪ್ರಭಾ ನದಿಯ ದಂಡೆಗೆ ಹೊಂದಿಕೊಂಡಂತೆ ಇರುತ್ತದೆ ಎಂದರೆ ಸರಿ. ಅಸುಂಡಿ ಗ್ರಾಮದಿಂದ ಸ್ವಾಧೀನಗೊಂಡ ಜಮೀನು 3 ಕಿಮೀ ದೂರದಲ್ಲಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1.5 ಕಿಮೀ ದೂರದಲ್ಲಿರುತ್ತದೆ. ಮಲಪ್ರಭಾ ಆಣೆಕಟ್ಟು ಹಿನ್ನೀರು ಬರುವುದರಿಂದ ಜಮೀನು ಜವುಗು ಭೂಮಿ ಇರುತ್ತದೆ. ಮನೆ ಕಟ್ಟಲು ಬುನಾದಿಯನ್ನು 10-15 ಅಡಿ ಆಳ ಅಗೆಯಬೇಕಾಗುತ್ತದೆ ಎಂದರೆ ಸರಿಯಲ್ಲ. 5-6 ಅಡಿ ಬೇಕಾಗುತ್ತದೆ ಎಂದು ಹೇಳುತ್ತಾರೆ. ಭೂಮಿಯು ಎರೆ ಮಣ್ಣಿನ ಭೂಮಿ ಇರುವುದರಿಂದ ಅಡಿಪಾಯ ಗಟ್ಟಿ ಇರುವುದಿಲ್ಲ ಎಂದರೆ ಸರಿಯಲ್ಲ. ಸ್ವಾಧೀನಗೊಂಡ ಜಮೀನು ಒಣಬೇಸಾಯ ಜಮೀನು ಎಂದರೆ ಸರಿಯಲ್ಲ. ಜಮೀನುಗಳಲ್ಲಿ

ಒಣಬೇಸಾಯದ ಬೆಳೆಗಳನ್ನು ಬೆಳೆಯುತ್ತಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನೀರಾವರಿ ಬೆಳೆಗಳನ್ನು ಬೆಳೆಯುತ್ತಿದ್ದೆವು.

2. ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ 1ನೇ ಪ್ರತಿವಾದಿಯವರ ಕಛೇರಿಯಿಂದ ನೋಟಿಸ ಜಾರಿ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಸಮಕ್ಷಮ ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿ. ಖರೀದಿ ಅಂಕಿ ಸಂಖ್ಯೆಗಳನ್ನು ಪರಿಗಣಿಸಿ ನಮ್ಮ ಜಮೀನಿಗೆ ಸೂಕ್ತ ಬೆಲೆ ನಿಗದಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸ್ವಾಧೀನಗೊಂಡ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಪರಿವರ್ತಿಸಿಕೊಂಡಿದ್ದು, ಜಮೀನಿನಲ್ಲಿ ಬೆಲ್ಲದ ಗಾಣವನ್ನು ಅಳವಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಜಮೀನಿನಲ್ಲಿ ಬೆಲ್ಲದ ಕಾರ್ಖಾನೆ ಇರುವ ಬಗ್ಗೆ ಮತ್ತು ಕಟ್ಟಡ ಇರುವ ಬಗ್ಗೆ ಪ್ರತ್ಯೇಕ ದಾಖಲೆ ಅಥವಾ ಪೋಟೋಗಳನ್ನು ಹಾಜರುಪಡಿಸಿರುವುದಿಲ್ಲ. ಬೆಲ್ಲದ ಕಾರ್ಖಾನೆಗೆ ಯಾವುದೇ ಪರವಾನಿಗೆ ಬೇಕಾಗುವುದಿಲ್ಲ ಎಂದರೆ ಸರಿಯಲ್ಲ. ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಗತ್ಯ ಪ್ರಮಾಣಪತ್ರ ಪಡೆಯಬೇಕಾಗುತ್ತದೆ ಎಂದರೆ ಸರಿಯಲ್ಲ. ನಿಪಿ-4 ಆದೇಶದಲ್ಲಿ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ನಿರಾಕ್ಷೇಪಣ ಪತ್ರವನ್ನು ಪಡೆಯಬೇಕಾಗಿರುತ್ತದೆ ಎಂದರೆ ಸರಿ. ಈ ರೀತಿ ನಾನು ಯಾವುದೇ ಪ್ರಮಾಣಪತ್ರ ಪಡೆದಿರುವುದಿಲ್ಲ. ಸಾಕ್ಷಿಯು ಮುಂದುವರೆದು ಬೆಲ್ಲದ ಕಾರ್ಖಾನೆಗೆ ಪ್ರಮಾಣಪತ್ರದ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿರುತ್ತಾರೆ. ಸದರಿ ಜಮೀನಿನಲ್ಲಿ ಯಾವುದೇ ಕಾರ್ಖಾನೆ ಇರುವುದಿಲ್ಲ ಎಂದರೆ ಸರಿ. ಜಮೀನಿನಲ್ಲಿ ಈಗ ನಾವು ಬೇಸಾಯ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

3. ಕೆಂಚನಾಲಕೊಪ್ಪ, ನಡುವಿನಹಳ್ಳಿ ಗ್ರಾಮದ ಜಮೀನುಗಳು ಅಸುಂಡಿ ಗ್ರಾಮದ ಜಮೀನುಗಳಿಂದ ಹೆಚ್ಚಿ ನ ಫಲವತ್ತತೆ ಹೊಂದಿರುತ್ತವೆ ಎಂದರೆ ಸರಿಯಲ್ಲ. ಅಸುಂಡಿ ಗ್ರಾಮದ ಜಮೀನುಗಳ ಬೆಲೆ ಎಕರೆಗೆ 5 ಲಕ್ಷಕ್ಕಿಂತ ಹೆಚ್ಚಿ ಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-7 ಖರೀದಿ ಪತ್ರದ ಜಮೀನು ನಮ್ಮ ಜಮೀನಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ.

4. ಅಸುಂಡಿ ಗ್ರಾಮದಲ್ಲಿ ಇಲ್ಲಿಯವರೆಗೆ ಖರೀದಿ ಪತ್ರಗಳಾಗಿರುತ್ತವೆ ಎಂದರೆ ಸರಿ. ಅಸುಂಡಿ ಗ್ರಾಮದಲ್ಲಿ ಸಾಕಷ್ಟು ಜಮೀನುಗಳು ಖರೀದಿಯಾಗಿದ್ದರೂ , ಕಡಿಮೆ ಬೆಲೆ ಇರುವ ಕಾರಣ ಉದ್ದೇಶಪೂರ್ವಕವಾಗಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಜಮೀನಿನಲ್ಲಿ ಕಬ್ಬು ಬೆಳೆಯುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜುರಪಡಿಸಿರುವುದಿಲ್ಲ. ನಿಪಿ-

4ರನ್ವಯ ಯಾವ ಉದ್ದೇಶಕ್ಕೆ ಜಮೀನನ್ನು ಪರಿವರ್ತನೆ ಮಾಡಿಕೊಂಡಿರುತ್ತೇದೆಯೋ ಸದರಿ ಉದ್ದೆಶವನ್ನು ಇಲ್ಲಿಯವರೆಗೂ ಜಾರಿಗೆ ತಂದಿರುವುದಿಲ್ಲ ಎಂದರೆ ಸರಿ. ಮಹಾಂತೇಶ ಬಿ ಶೆಟ್ಟರ ಇವರು ನಮ್ಮ ಊರಿನವರು ಎಂದರೆ ಸರಿ. ಅವರು ನನಗೆ ಪರಿಚಯವಿರುವುದರಿಂದ ಅವರಿಂದ ನಾನು ನಿಪಿ-6ರಂತೆ ಸುಳ್ಳು ವರದಿ ಪಡೆದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-6 ವರದಿಯು ನನ್ನ ಜಮೀನಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ಹಿನ್ನೀರಿನಿಂದ ನಮ್ಮ ಜಮೀನಿಗೆ ನಷ್ಟವಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಹಿನ್ನೀರಿನಿಂದ ನಮ್ಮ ಜಮೀನಿಗೆ ಹಾನಿಯಾಗಿರುತ್ತದೆ ಎಂದು ನಷ್ಟ ಪರಿಹಾರ ಕೇಳಿ ಯಾವುದೇ ದಾವೆ ಹಾಕಿರುವುದಿಲ್ಲ. 1ನೇ ಪ್ರತಿವಾದಿಯವರು ನನ್ನ ಜಮೀನಿಗೆ ಸೂಕ್ತ ಪರಿಹಾರ ನಿಗದಿ ಮಾಡಿದ್ದರೂ, ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಇಂದು ದಿನಾಂಕಃ 19.06.2026 ರಂದು ಸಾಕ್ಷಿಯನ್ನು ಪುನಃ 03.00 ಗಂಟೆಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ **ಸವಾಲುಃ 2ನೇ ಪ್ರತಿವಾದಿ ಪರ ಶ್ರೀ ಎಸ್ ಬಿ ಪಿ ವಕೀಲರಿಂದಃ**

5. ಐತೀರ್ಪು ಹೊರಡಿಸಿದ ನಂತರ ನನಗೆ ನೋಟಿಸ ಜಾರಿ ಮಾಡಿದ್ದರು. ನೋಟಿಸಿನ ದಿನಾಂಕ ನನಗೆ ನೆನಪಿಲ್ಲ. ಹೆಚ್ಚಿ ನ ಪರಿಹಾರ ಪಡೆದುಕೊಳ್ಳಲು ತಕರಾರು ಅರ್ಜಿ ಸಲ್ಲಿಸಿದ್ದು, ಅರ್ಜಿ ಸಲ್ಲಿಸಿದ ದಿನಾಂಕ ನನಗೆ ನೆನಪಿಲ್ಲ. ಸದರಿ ಅರ್ಜಿಯನ್ನು 1ನೇ ಪ್ರತಿವಾದಿಯವರು ನಿಗದಿತ ಸಮಯದಲ್ಲಿ ನ್ಯಾಯಾಲಯಕ್ಕೆ ಕಳುಹಿಸಿದ ಬಗ್ಗೆ ವಿಚಾರಣೆ ಮಾಡಿಲ್ಲ. ನಾನು ಸಲ್ಲಿಸಿದ ಅರ್ಜಿಯು ನ್ಯಾಯಾಲಯಕ್ಕೆ ನಿಗದಿತ ಸಮಯದಲ್ಲಿ ಬಂದಿರುವುದಿಲ್ಲ, ಆದ್ದರಿಂದ ನ್ಯಾಯಾಲಯಕ್ಕೆ ಪ್ರತ್ಯೇಕ ಅರ್ಜಿ ಸಲ್ಲಿಸಿರುವುದಿಲ್ಲ.

6. ಸ್ವಾಧೀನಗೊಂಡ ಜಮೀನಿನ ಕ್ಷೇತ್ರ 10 ಗುಂಟೆ ಇರುತ್ತದೆ. ಒಟ್ಟು 7 ಜನರ ಹೆಸರಿಗೆ ಐತೀರ್ಪು ಹೊರಡಿಸಿರುತ್ತಾರೆ. 7 ಜನರಲ್ಲಿ PWD ಸರ್ಕಾರ ಎಂದೂ ಕೂಡ ನಮೂದು ಇರುತ್ತದೆ ಎಂದರೆ ಸರಿ. 7 ಜನರು 1ನೇ ಪ್ರತಿವಾದಿ ಸಮಕ್ಷಮ ಅರ್ಜಿ ಸಲ್ಲಿಸಿರುವುದಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಸ್ವಾಧೀನಗೊಂಡ ಜಮೀನಿನಲ್ಲಿ ನನ್ನ ಕ್ಷೇತ್ರ ಎಷ್ಟು ಎಂದು ನಿಖರವಾಗಿ ನಮೂದಿಸಿರುವುದಿಲ್ಲ ಎಂದರೆ ಸರಿ. ಸದರಿ 10 ಗುಂಟೆ ಜಮೀನು ನನ್ನೊಬ್ಬನದೇ ಮಾಲ್ಕಿಯ ಜಮೀನು ಎಂದು ತೋರಿಸಲು

ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಉಳಿದ ಐತೀರ್ಪುದಾರರು ಅರ್ಜಿ ಸಲ್ಲಿಸಲು ಯಾವುದೇ ಜಿಪಿಎ ಕೊಟ್ಟಿಲ್ಲ.

7. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಿಪಿ-4 ಪರಿವರ್ತನಾ ಆದೇಶದ ಷರತ್ತುಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಭೂಪರಿವರ್ತನೆಯಾದ ಜಮೀನಿನಲ್ಲಿ ಪರಿವರ್ತನಾ ಶುಲ್ಕ ಕಟ್ಟಬೇಕು ಮತ್ತು ಅಭಿವೃದ್ದಿಗೆ ಸ್ಥಳಾವಕಾಶ ನೀಡಬೇಕು ಎಂದರೆ ಸರಿ. ಪರಿವರ್ತನೆಯಾದ ಜಮೀನಿನ 2/3 ಹಿಸ್ಸೆ ಸರ್ಕಾರಕ್ಕೆ ಸಲ್ಲಬೇಕು ಎಂದರೆ ಸರಿ. ಸ್ವಾಧೀನಗೊಂಡ ಜಮೀನು ಸರ್ಕಾರಕ್ಕೆ ಹೋದ ಹಿಸ್ಸೆಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಜಮೀನಿನ ಮಾರುಕಟ್ಟೆ ಮೌಲ್ಯದ ಬಗ್ಗೆ ಮೌಲ್ಯಮಾಪನದ ವರದಿ ಸಲ್ಲಿಸಿರುವವರ ಸಾಕ್ಷಿ ಮಾಡಿಸುತ್ತೇನೆ. ನನ್ನ ಜಮೀನು ಅಸುಂಡಿ ಗ್ರಾಮದ ಮಧ್ಯದಲ್ಲಿರುತ್ತದೆ ಎಂದರೆ ಸರಿ. ಸ್ವಾಧೀನಗೊಂಡ ಜಮೀನಿನ ಪಿಟಿ ಶೀಟ ಹಾಜರುಪಡಿಸಿರುವುದಿಲ್ಲ. ಪಿಟಿ ಶೀಟ ಹಾಜರುಪಡಿಸಿದರೆ ಜಮೀನು ರಸ್ತೆಗೆ ಹೊಂದಿಕೊಂಡಿರುತ್ತದೆಯೋ ಇಲ್ಲವೋ ಎಂದು ತಿಳಿದು ಬರುತ್ತದೆ ಎಂದು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸ್ವಾಧೀನಗೊಂಡ ಜಮೀನಿನ ಸುತ್ತಮುತ್ತಲಿನ ಜಮೀನುಗಳು ಸ್ವಾಧೀನಗೊಂಡಿರುತ್ತವೆ ಎಂದರೆ ಸರಿ. ಸದರಿ ಜಮೀನುಗಳು ವ್ಯವಸಾಯಕ್ಕೆ ಯೋಗ್ಯವಾದ ಜಮೀನುಗಳು ಎಂದರೆ ಸರಿ. ನನ್ನ ಸ್ವಾಧೀನಗೊಂಡ ಜಮೀನೂ ಕೂಡ ವ್ಯವಸಾಯದ ಜಮೀನು ಎಂದರೆ ಸರಿ. ನನ್ನ ಸ್ವಾಧೀನಗೊಂಡ ಜಮೀನು ಮತ್ತು ಸುತ್ತಮುತ್ತಲಿನ ಜಮೀನುಗಳನ್ನು ಪರಿಶೀಲಿಸಿ ಅವುಗಳು ವ್ಯವಸಾಯದ ಜಮೀನುಗಳು ಎಂದು ಪರಿಗಣಿಸಿ ಪರಿಹಾರ ನಿಗದಿಪಡಿಸಿರುತ್ತಾರೆ ಎಂದರೆ ಸರಿ. ಅಸುಂಡಿ ಗ್ರಾಮದಲ್ಲಿ ಮಾರಾಟ ಅಂಕಿ ಸಂಖ್ಯೆಗಳು ಇರದೇ ಇರುವ ಕಾರಣ ಶಿಂಗಾರಕೊಪ್ಪ ಗ್ರಾಮದ ಖರೀದಿ ಅಂಕಿ ಸಂಖ್ಯೆಗಳನ್ನು ಪರಿಗಣಿಸಿ ಪರಿಹಾರ ನಿಗದಿಪಡಿಸಿರುತ್ತಾರೆ ಎಂದರೆ ಸರಿ. ಶಿಂಗಾರಕೊಪ್ಪ ಗ್ರಾಮ ಸವದತ್ತಿ ಶಹರಕ್ಕೆ ಹೊಂದಿಕೊಂಡ ಗ್ರಾಮ ಎಂದರೆ ಸರಿಯಲ್ಲ. ಅಸುಂಡಿ ಗ್ರಾಮಕ್ಕಿಂತ ಸಿಂಗಾರಕೊಪ್ಪ ಗ್ರಾಮದ ಜಮೀನುಗಳ ಬೆಲೆ ಹೆಚ್ಚಿಗೆ ಇರುತ್ತದೆ ಎಂದರೆ ಸರಿ. ಆದ ಕಾರಣ 1ನೇ ಪ್ರತಿವಾದಿಯವರು ನಮ್ಮ ಜಮೀನಿಗೆ ಹೆಚ್ಚಿನ ಬೆಲೆ ನಿಗದಿಪಡಿಸಿರುತ್ತಾರೆ ಎಂದರೆ ಸರಿ.

8. ಕೆಂಚಲಾರಕೊಪ್ಪ ಗ್ರಾಮವು ಸವದತ್ತಿ ಶಹರಕ್ಕೆ ಹೊಂದಿಕೊಂಡಂತೆ ಇರುವ ಗ್ರಾಮ ಎಂದರೆ ಸರಿ. ಸವದತ್ತಿ ಮತ್ತು ಕೆಂಚಲಾರಕೊಪ್ಪ ಗ್ರಾಮಗಳು ಒಂದಕ್ಕೊಂದು ಕೂಡಿಕೊಂಡಿರುತ್ತವೆ ಎಂದರೆ ಸರಿ. ಕೆಂಚಲಾರಕೊಪ್ಪದ ಜಮೀನುಗಳಲ್ಲಿ ವಸತಿ ಮತ್ತು ವಾಣಿಜ್ಯದ ಜಮೀನುಗಳ ಬೆಲೆ ಹೆಚ್ಚಿಗೆ ಇರುತ್ತವೆ

ಎಂದರೆ ಸರಿ. ನಿಪಿ-7 ಖರೀದಿ ಪತ್ರವು ಕೆಂಚಲಾರಕೊಪ್ಪ ಗ್ರಾಮದ ಜಮೀನಿನ ಖರೀದಿ ಪತ್ರ ಎಂದರೆ ಸರಿ. ಸದರಿ ಜಮೀನು ನೀರಾವರಿ ಜಮೀನು ಇರುತ್ತದೆ ಎಂದರೆ ಸರಿ. ನಿಪಿ-7 ಖರೀದಿ ಪತ್ರದ ಜಮೀನು ಕಡಿಮೆ ಕ್ಷೇತ್ರದ ಜಮೀನು ಇರುವುದರಿಂದ, ಅದನ್ನು ಕೃಷಿಯೇತರ ಚಟುವಟಿಕೆಗಳಿಗೆ ಖರೀದಿಸಿದ ಜಮೀನು ಎಂದರೆ ಸರಿಯಲ್ಲ.

9. ನಿಪಿ-8 ಆದೇಶದ ವಿರುದ್ಧ 2ನೇ ಪ್ರತಿವಾದಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-9 ಮಾರುಕಟ್ಟೆ ಮೌಲ್ಯ ಪ್ರಮಾಣಪತ್ರವು ಮುನವಳ್ಳಿ ಗ್ರಾಮಕ್ಕೆ ಸಂಬಂಧಿಸಿದ್ದು, ಅಸುಂಡಿ ಗ್ರಾಮಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿ. ನಿಪಿ-11 ಮಾರ್ಗ ಸೂಚಿ ದರಪಟ್ಟಿಯು ಸವದತ್ತಿ ಶಹರಕ್ಕೆ ಸಂಬಂಧಿಸಿದ್ದು , ಅಸುಂಡಿ ಗ್ರಾವುಕ್ಕೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ನಿಪಿ-12 ಅಧಿಸೂಚನೆಯು ನನ್ನ ಜಮೀನಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯವರು ಸ್ವಾಧೀನಗೊಂಡ ಜಮೀನನ್ನು ಕೃಷಿ ಜಮೀನು ಎಂದು ಪರಿಗಣಿಸಿ ನೀಡಿದ ಪರಿಹಾರ ನ್ಯಾಯಸಮ್ಮತವಾಗಿದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯವರು ನನ್ನ ಜಮೀನಿಗೆ ಸೂಕ್ತ ಪರಿಹಾರ ನಿಗದಿ ಮಾಡಿದ್ದರೂ, ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

<u>**ಮರುವಿಚಾರಣೆಃ ಇಲ್ಲ**</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಕ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಸುಭಾಷ ಸಂಕದ)
1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಬೆಳಗಾವಿ.